ಶ್ರೀ ಕೃಷ್ಣ: (ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವರು).—

ಎ) ಪ್ರತಿ ಲೀಟರ್‌ಗೆ ಳಿ ಪೈಸೆಗಳು. ೫೦೦ ಲೀಟರ್‌ಗಿಂತ ಜಾಸ್ತಿ ವಾರಾಟ ಮಾಡುವವರಿಗೆ, ೫೦೦ ಲೀಟರ್‌ಗೆ ಮೀರಿದ ಪ್ರಮಾಣಕ್ಕೆ ಪ್ರತಿ ಲೀಟರ್‌ಗೆ ೬ ಪೈಸೆಯಂತೆ ಕಮೀಷನ್ ನೀಡಲಾಗುತ್ತಿದೆ.

ಬಿ) ಪ್ರತಿ ಲೀಟರ್ ಹಾಲು ವಾರಾಟಕ್ಕೆ ೮ ಪೈಸೆ.

ಸಿ) ಇಲ್ಲ.

ಡಿ) ಇಲ್ಲ. ಆದರೆ ೫೦೦ ಲೀಟರ್‌ಗಿಂತ ಜಾಸ್ತಿ ವಾರಾಟ ಸಾಡುವವರಿಗೆ ೫೦೦ ಲೀಟರ್‌ಗೆ ಮೀರಿದ ಪ್ರಮಾಣಕ್ಕೆ ಪ್ರತಿ ಲೀಟರ್ ೬ ಪೈಸೆ ಕಮೀಷನ್ ಕೊಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್‌ಗಳ ಬಗ್ಗೆ

೩೦೨೫. ಶ್ರೀ ಪಿ. ಸಿ. ಪಾಟೀಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಬೆಂಗಳೂರು ನಗರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್‌ಗಳ ಒಟ್ಟು ಸಂಖ್ಯೆ.

ಬಿ) ಈ ಬೂತ್‌ಗಳ ದುರಸ್ತಿ ಮತ್ತು ಸುಣ್ಣ ಬಳಿಸುವ ಕಾರ್ಯಪನ್ನು ಇದುವರೆಗೆ ತೆಗೆದು ಕೊಳ್ಳಲಾಗಿದೆಯೇ ?

ಸಿ) ಈ ಬೂತ್‌ಗಳ ದುರಸ್ತಿ ಮತ್ತು ಸುಣ್ಣ ಬಳಿಯುವ ಕಾರ್ಯಕ್ಕೆ ಇತ್ತೀಚೆಗೆ ಟೆಂಡರ್ ಕರೆದಿರುವುದು ನಿಜವೇ ?

ಡಿ) ಹಾಗಿದ್ದಲ್ಲಿ ಗುತ್ತಿಗೆದಾರನು ದುರಸ್ತಿ ಮತ್ತು ಸುಣ್ಣ ಬಳಿಯುವ ಕಾರ್ಯವನ್ನು ತೆಗೆದು ಕೊಂಡಿದ್ದಾನೆಯೇ ?

ಇ) ಇತ್ತೀಚೆಗೆ ಬಾರಿ ಮಳೆ ಬಿದ್ದಿರುವುದರಿಂದ ಈ ಬೂತ್‌ಗಳನ್ನು ದುರಸ್ತಿ ಮಾಡಲು ಹಾಗೂ ಸುಣ್ಣ ಬಳಿಸಲು ಸರ್ಕಾರವು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳುವುದೆ ?

ಶ್ರೀ ಕೃಷ್ಣ. (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಎ) ೧೨೧

ಬಿ) ಅಗತ್ಯವಿದ್ದರೆ ಸುಣ್ಣ ಪುಟ್ಟ ದುರಸ್ತಿಗಳನ್ನು ಮಾಡಲಾಗಿದೆ.

ಸಿ) ಇಲ್ಲ.

ಡಿ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಶ್ರೀರಾಮಪುರದ ಪರಿಶ್ಚಂದ್ರ ಘಾಟಿನಿಂದ ವಿಧಾನ ಸೌಧಕ್ಕೆ ಓಡಿಸಲಾಗುತ್ತಿರುವ ಬಸ್‌ಗಳ ಬಗ್ಗೆ

೩೦೨೦. ಶ್ರೀಮತಿ ಪಿ. ಸಿ. ಪಾಟೀಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಪ್ರತಿನಿತ್ಯ ಶ್ರೀರಾಮಪುರ ಹರಿಶ್ಚಂದ್ರ ಘಾಟಿನಿಂದ ವಿಧಾನಸೌಧಕ್ಕೆ ಟಿಕ್ ಅವರ್‌ನಲ್ಲಿ ಎಷ್ಟು ಬಸ್‌ಗಳನ್ನು ಓಡಿಸಲಾಗುತ್ತಿದೆ.

ಬಿ) ಈ ಬಸ್‌ಗಳು ಸರಿಯಾಗಿ ಓಡದೆ ಇರುವುದು ಗಮನಕ್ಕೆ ಬಂದಿದೆಯೆ ?

ಸಿ) ಶ್ರೀರಾಮಪುರ ಹರಿಶ್ಚಂದ್ರ ಘಾಟಿನಿಂದ ಹಿಂದೆ ಒಂದು ಮಹಿಳಾ ವಿಶೇಷ ಬಸ್ ಸೌಕರ್ಯ ಇತ್ತೆ ?